# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1122 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಕೇಂದ್ರ ಸರ್ಕಾರ ಜಾರಿಗೊಳಿಸಿದ ಡಿಜಿಟಲ್ ಇಂಡಿಯಾ ಲ್ಯಾಂಡ್ ರೆಕಾರ್ಡ್ ಯೋಜನೆ ಜಾರಿಯಲ್ಲಿದೆಯೆ; | ರಾಜ್ಯದಲ್ಲಿ ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಕುರಿತು ಕೇಂದ್ರ ಸರ್ಕಾರದ Digital India Land Records Modernization Program (DILMRP) ಯೋಜನೆಯು ಜಾರಿಯಲ್ಲಿದೆ. |
| ಆ) | ಇದ್ದಲ್ಲಿ, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಭೂದಾಖಲೆಗಳ ನಿರ್ವಹಣೆಯು ಅತ್ಯಂತ ಅವಶ್ಯ ವಿರುವುದರಿಂದ ಸರ್ಕಾರ ಈ ಕುರಿತು ಕೈಗೊಂಡ ಕ್ರಮಗಳೇನು; | ಕಂದಾಯ ಇಲಾಖೆಯಿಂದ ಭೂದಾಖಲೆಗಳ ನಿರ್ವಹಣೆಗಾಗಿ ಈ ಕೆಳಗಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಮುಂದಾಗಿದೆ.<br>1. ಭೂಮಿ ಯೋಜನೆಯಡಿಯಲ್ಲಿ ರಾಜ್ಯದ ಎಲಾ ಕೃಷಿ ಜಮೀನಿನ ಪಹಣಿಗಳನ್ನು ಡಿಜಟಲೀಕರಣಗೊಳಿಸಿ ನಿರ್ವಹಣೆ ಮಾಡಲಾಗುತ್ತಿದೆ.<br>2. ಭೂಮಾಪನ ಇಲಾಖೆಯಿಂದ ಭೂದಾಖಲೆಗಳು ಮತ್ತು ರಾಜ್ಯದ ಎಲ್ಲಾ ಗ್ರಾಮ ನಕಾಶೆಗಳನ್ನು ಡಿಜಟಲೀಕರಣಗೊಳಿಸಲಾಗಿದ್ದು, ಸಾರ್ವಜನಿಕರ ಉಚಿತ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ.<br>3. ಕಂದಾಯ ಇಲಾಖೆಯ ಎಲ್ಲಾ ಭೂದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಸಂರಕ್ಷಿಸಲಾಗುತ್ತಿದೆ.<br>4. ಸರ್ವೆ ನಂಬರುವಾರು ಹಿಸ್ಸಾ ದಾಖಲೆಗಳನ್ನು ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ ಬೆಂಗಳೂರು ಇವರ ಸಹಯೋಗದಲ್ಲಿ ಡಿಜಟಲೀಕರಣಗೊಳಿಸಲಾಗುತ್ತಿದ್ದು, ಈವರೆಗೆ ರಾಜ್ಯದ ಒಟ್ಟು 1.80 ಕೋಟಿ ದಾಖಲೆಗಳ ಪೈಕಿ 1.31 ಕೋಟಿ ದಾಖಲೆಗಳ ಡಿಜಿಟೈಸ್ ಮತ್ತು ಜಿಯೊರೆಫರೆನ್ಸ್ (Geo-Reference) ಮಾಡಲಾಗಿದೆ.<br>5. ಭೂದಾಖಲೆಗಳಲ್ಲಿ ಅತ್ಯಂತ ಮಹತ್ವದ ದಾಖಲೆಯಾದ ಆಕಾರಬಂದ ಪುಸ್ತಕಗಳನ್ನು ಡಿಜಟಲೀಕರಣ ಗೊಳಿಸಲಾಗುತ್ತಿದೆ.<br>6. ದಾಖಲೆಗಳ ಸಂರಕ್ಷಣಾ ಕ್ರಮದಡಿ ದಾಖಲೆ ಕೊಠಡಿಗಳ ಅಧುನೀಕರಣ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | ಇದರಡಿಯಲ್ಲಿ ಕಂದಾಯ ಇಲಾಖೆಯ ಎಲ್ಲಾ ದಾಖಲೆಗಳನ್ನು Indexing & Cataloging ಮಾಡಿ ಸ್ಕ್ಯಾನಿಂಗ್ ಮಾಡಿ ಸಂರಕ್ಷಿಸಲಾಗುತ್ತಿದೆ.<br>7. ಇದುವರೆಗೂ ಅಳತೆಯಾಗದೇ ಇರುವ ಗ್ರಾಮೀಣ ಜನವಸತಿ ಪ್ರದೇಶದ ಆಸ್ತಿಗಳನ್ನು ಸ್ವಮಿತ್ವ ಯೋಜನೆಯಡಿಯಲ್ಲಿ ಡ್ರೋಣ್ ಮೂಲಕ ಸರ್ವೆ ಮಾಡಿ ಹಕ್ಕುದಾಖಲೆಗಳನ್ನು ಡಿಜಿಟಲ್ ಮಾಧ್ಯಮದಲ್ಲಿ ಸೃಜಿಸಿ ವಿತರಿಸಲಾಗುತ್ತಿದೆ. ಈವರೆಗೆ 15,392 ಗ್ರಾಮಗಳಲ್ಲಿ ಡ್ರೋಣ್ ಹಾರಾಟ ಕೈಗೊಳ್ಳಲಾಗಿದೆ. ಈ ಪೈಕಿ 3682 ಗ್ರಾಮಗಳ ಒಟ್ಟು 9.93 ಲಕ್ಷ ಸ್ವಮಿತ್ವ ಪಿ.ಆರ್.ಕಾರ್ಡ್ ಗಳನ್ನು ಸೃಜಿಸಿ ವಿತರಿಸಲಾಗಿದೆ.<br>8. ನೋಂದಣಿಗೆ ಸಂಬಂಧಿಸಿದಂತೆ ಶಾಶ್ವತ ದಾಖಲೆಗಳನ್ನು scanning and digital ಕಾರ್ಯವನ್ನು ಪ್ರಾರಂಬಿಸಿದ್ದು, ಗಾಂಧಿನಗರ ಉಪನೊಂದಣಿ ಕಛೇರಿಯಲ್ಲಿ ಪೈಲೆಟ್ ಆಧಾರದ ಮೇಲೆ ಸ್ಕ್ಯಾನಿಂಗ್ ಮತ್ತು ಡಿಜಟಲೀಕರಣ ಕಾರ್ಯವನ್ನು ಕೈಗೊಳ್ಳಲಾಗಿದೆ. |
| ಇ) | ಗ್ರಾಮೀಣ ಭಾಗದ ಜನರು ತಮ್ಮ ಪೂರ್ವಜರ ಹೆಸರಿನಲ್ಲಿರುವ ಭೂದಾಖಲೆಗಳನ್ನು ಸಂಪನ್ಮೂಲ ಕೊರತೆಯಿರುವ ಅಥವಾ ವಿವಾದಗಳಿಂದ ನೋಂದಣಿ ಮಾಡಿಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಮೀಣ ಭಾಗದ ಜನರು ದಸ್ತಾವೇಜುಗಳ ನೋಂದಣಿಗಾಗಿ ಅಗತ್ಯ ಮಾದರಿಯಲ್ಲಿ ಸ್ವತ್ತಿನ ದಾಖಲೆಗಳನ್ನು ನೋಂದಣಿ ಸಮಯದಲ್ಲಿ ಹಾಜರು ಪಡಿಸಿದ್ದಲ್ಲಿ ನೋಂದಣಿ ಮಾಡಲಾಗುತ್ತಿರುವುದರಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ. |
| ಈ) | ಬಂದಿದ್ದಲ್ಲಿ, ಇಂತಹ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? | |

**ಸಂಖ್ಯೆ: ಕಂಇ 207 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು